ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಕೆ.ಆರ್.ವೃತ್ತ, ಬೆಂಗಳೂರು -1**

---

ಸಂಖ್ಯೆ: ಸಿ1(1) ಶಿ.ಸ್ವಪ್ರ 54/2017-18 ದಿನಾಂಕ: 06-03-2018

# ಜ್ಞಾಪನ

ವಿಷಯ:- ಮುಖ್ಯಶಿಕ್ಷಕರು ಹಾಗೂ ತತ್ಸಮಾನ ಗ್ರೂಪ್-ಬಿ ವೃಂದದ ಹುದ್ದೆಗಳಿಂದ ಶಿಕ್ಷಣಾಧಿಕಾರಿಗಳು ಹಾಗೂ ತತ್ಸಮಾನ ವೃಂದದ ಗ್ರೂಪ್-ಎ ವೃಂದದ ಕಿರಿಯ ಶ್ರೇಣಿ ಹುದ್ದೆಗೆ ಬಡ್ತಿ ಹೊಂದಿದ ಹಾಗೂ ಈ ಸಂಬಂಧ ವರ್ಗಾವಣೆಗೊಂಡ ಅಧಿಕಾರಿಗಳನ್ನು ಕರ್ತವ್ಯದಿಂದ ಬಿಡುಗಡೆಗೊಳಿಸುತ್ತಿರುವ ಬಗ್ಗೆ.

ಉಲ್ಲೇಖ:-1) ಸರ್ಕಾರದ ಆದೇಶ ಸಂಖ್ಯೆ ಇಡಿ 155 ಡಿಜಿಎಂ 2017 ದಿನಾಂಕ:02-02-2018.

&&&

ಮೇಲ್ಕಂಡ ಉಲ್ಲೇಖಿತ ಸರ್ಕಾರದ ಆದೇಶದನ್ವಯ ಮುಖ್ಯಶಿಕ್ಷಕರು ಹಾಗೂ ತತ್ಸಮಾನ ಗ್ರೂಪ್-ಬಿ ವೃಂದದ ಹುದ್ದೆಗಳಿಂದ ಶಿಕ್ಷಣಾಧಿಕಾರಿಗಳು ಹಾಗೂ ತತ್ಸಮಾನ ವೃಂದದ ಗ್ರೂಪ್-ಎ ವೃಂದದ ಕಿರಿಯ ಶ್ರೇಣಿ ಹುದ್ದೆಗೆ ಮಾತೃ ವೃಂದ ಹಾಗೂ ಸ್ಥಳೀಯ ವೃಂದದಿಂದ ಬಡ್ತಿ ನೀಡಿ ಆದೇಶಿಸಲಾಗಿದೆ. ಮತ್ತು ಇದೇ ಆದೇಶದ ಭಾಗ-2 ರಲ್ಲಿ ಕೆಲವು ಶಿಕ್ಷಣಾಧಿಕಾರಿಗಳ ವೃಂದದ ಅಧಿಕಾರಿಗಳನ್ನು ವರ್ಗಾವಣೆಗೊಳಿಸಿ ಆದೇಶಿಸಲಾಗಿದೆ. ಆದೇಶಿಸಿದಂತೆ ಬಡ್ತಿ ಹೊಂದಿದ ಮತ್ತು ವರ್ಗಾವಣೆಗೊಂಡಿರುವ ಕೆಲವು ಅಧಿಕಾರಿಗಳು ಈವರೆಗೆ ಬಿಡುಗಡೆ ಹೊಂದದೇ ಇರುವುದು ಈ ಕಛೇರಿಯ ಹಾಗೂ ಮಾನ್ಯ ಸಚಿವರ ಗಮನಕ್ಕೆ ಬಂದಿರುತ್ತದೆ.

ಆದ್ದರಿಂದ ಉಲ್ಲೇಖಿತ ಆದೇಶದಲ್ಲಿ ಬಡ್ತಿ ಹೊಂದಿದ ಮತ್ತು ವರ್ಗಾವಣೆಗೊಂಡು ಈವರೆವಿಗೆ ಬಿಡುಗಡೆಯಾಗದೇ ಇರುವ ಅಧಿಕಾರಿಗಳನ್ನು ಈ ಕಛೇರಿ ವತಿಯಿಂದಲೇ ಈ ದಿನಾಂಕದಿಂದ ಜಾರಿಗೆ ಬರುವಂತೆ ಬಿಡುಗಡೆಗೊಳಿಸಿ ಆದೇಶಿಸಿದೆ. ತತ್‌ಕ್ಷಣದಿಂದಲೇ ನಿಯುಕ್ತಿಗೊಳಿಸಿರುವ ಸ್ಥಳಗಳಲ್ಲಿ ಕರ್ತವ್ಯಕ್ಕೆ ಹಾಜರಾಗುವಂತೆ ಸೂಚಿಸಿದೆ. ತಪ್ಪಿದ್ದಲ್ಲಿ ನಿಯಮಾನುಸಾರ ಶಿಸ್ತುಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಯುವುದು.

[ಮಾನ್ಯ ಆಯುಕ್ತರ ಆದೇಶದ ಮೇರೆಗೆ]

[ಕೆ.ಬಿ. ಅಂಜನಪ್ಪ]
ಅಪರ ನಿರ್ದೇಶಕರು(ಆಡಳಿತ)

ಪ್ರತಿಯನ್ನು :

1. ರಾಜ್ಯದ ಎಲ್ಲಾ ನಿರ್ದೇಶಕರು, ಜಂಟಿನಿರ್ದೇಶಕರು, ಉಪನಿರ್ದೇಶಕರು(ಆಡಳಿತ), ಉಪನಿರ್ದೇಶಕರು(ಅಭಿವೃದ್ಧಿ), ಕ್ಷೇತ್ರಶಿಕ್ಷಣಾಧಿಕಾರಿಗಳು ಇವರಿಗೆ ಕಳುಹಿಸುತ್ತಾ ಅಧಿಕಾರಿಗಳ ಬಿಡುಗಡೆ ಮತ್ತು ಸೇರ್ಪಡೆಗೊಳಿಸಲು ತುರ್ತು ಕ್ರಮವಹಿಸುವಂತೆ ತಿಳಿಸಿ ಈ ಕಛೇರಿಗೆ ಕೂಡಲೇ ವರದಿ ಮಾಡಲು ಸೂಚಿಸಿದೆ.
2. ಕಛೇರಿ ಪ್ರತಿ.

Scanned by CamScanner